## ವಿದ್ಯಾರ್ಥಿಗಳು ಯಾವುದರಲ್ಲಿ ಮುಂದು?

ಬದಲಾವಣೆಯೊಂದಿಗೆ ಚಂದನ ವಾಹಿನಿಯಲ್ಲಿ 'ಥಟ್ ಅಂತ ಹೇಳಿ' ಕಾರ್ಯಕ್ರಮ ಬರುತ್ತಿದೆ. ಬದಲಾವಣೆಯ ನೆಪದಲ್ಲಿ ಕೇವಲ ವಿದ್ಯಾರ್ಥಿಗಳಿಗೆ ವೇದಿಕೆಯನ್ನು ಒದಗಿಸಿದಂತಿದೆ. ಬಂದ ವಿದ್ಯಾರ್ಥಿಗಳು ಪ್ರತಿಷ್ಠಿತ ಶಾಲೆಗಳಿಂದ ಬಂದವರೇ ಆಗಿದ್ದಾರೆ. ಅವರು ಯಾವುದಕ್ಕೂ ಉತ್ತರ ಹೇಳದಿದ್ದರೂ ಪರವಾಗಿಲ್ಲ. ಲೆಕ್ಕದಲ್ಲಿ ತಪ್ಪು ಉತ್ತರವನ್ನು ಕೊಡುತ್ತಿರುವುದನ್ನು ನೋಡಿದರೆ ಶಾಲೆಯಲ್ಲಿ ಏನನ್ನು ಕಲಿತಿದ್ದಾರೆ ಎಂದನಿಸದೆ ಇರದು. ಇನ್ನು ಸಾಮಾನ್ಯಜ್ಞಾನ, ಸಾಹಿತ್ಯ ಇವರಿಗೆ ದೂರವಿದ್ದಂತೆ ಕಾಣುತ್ತಿದೆ. ಹಾಗಾದರೆ ಈ ವಿದ್ಯಾರ್ಥಿಗಳು ಯಾವುದರಲ್ಲಿ ಮುಂದು?

—ಶಂಕರೇಗೌಡ ತುಂಬಕೆರೆ, ಮಂಡ್ಯ

## ನಾಯಿಬಾಲದ ಕಥೆ

ಸ್ಟಾರ್ ಸುವರ್ಣದಲ್ಲಿ ಪ್ರಸಾರವಾಗುವ 'ಅಮೃತವರ್ಷಿಣಿ' ಗರ್ಭಿಣಿಯರಿಗೆ ಆಹಾರ ಪದಾರ್ಥ ಕಂಡು ವಾಕರಿಕೆ ಬರುವಂತಾಗಿದೆ. ಅಮೃತಾ– ವರ್ಷಾ ಈ ಧಾರಾವಾಹಿಯಲ್ಲೇ ಮುದುಕಿಯರಾಗುತ್ತಾರೇನೋ?

'ನಾಯಿ ಬಾಲ ಯಾವತ್ತೂ ಡೊಂಕೆ' ಎನ್ನುವಂತೆ ಜೀವನದಲ್ಲೇ ಬುದ್ಧಿ ಕಲಿಯದ ಯಶೋದಾ, ಮಾನವ ಕುಲಕ್ಕೆ ಆದರ್ಶಪ್ರಾಯರಾದ ರಾಮಲಕ್ಷ್ಮಣ, ರಾಮಲಕ್ಷ್ಮಣರಂತಿದ್ದ ವಿಜಯ್– ವಿನಯ್ ಬಾಂಧವ್ಯವನ್ನು ಕುಲಗೆಡಿಸಿಬಿಟ್ಟಿದ್ದಾಳೆ. ಕೂಡು ಕುಟುಂಬ, ಒಗ್ಗಟ್ಟು, ಬಾಂಧವ್ಯ ಸಾರುವ ಸಂದೇಶ ಹೊತ್ತು ತಂದ ಧಾರಾವಾಹಿ ಅಗಿದೂ ಅಗಿದೂ ಚೂಯಿಂಗಮ್‌ನಂತಾಗಿದೆ. ನಿರ್ದೇಶಕರೆ, ಬೇಗ ಉಗಿದುಬಿಡಿ ಆಗಲ್ವಾ?

—ರತ್ನಾ ಅಶೋಕ ಗೊರವರ, ಧಾರವಾಡ

## ಅಪರೂಪದ ಕಾರ್ಯಕ್ರಮ

ಚಂದನದ ಅಪರೂಪದ ಕಾರ್ಯಕ್ರಮಗಳಲ್ಲಿ ಸಾಕ್ಷ್ಯಚಿತ್ರಗಳ ಪ್ರಸಾರವೂ ಒಂದು. ಸೆಪ್ಟೆಂಬರ್ 21 ರಂದು ರಾತ್ರಿ 7.30ಕ್ಕೆ ಪ್ರಸಾರವಾದ 'ಹೆಚ್.ಎಸ್. ಮಹದೇವ ಪ್ರಸಾದರ ಬದುಕು, ಸಾಧನೆ' ಎನ್ನುವ ಸಾಕ್ಷ್ಯಚಿತ್ರವು ಸಿರಿಗೇರಿ ಯರಿಸ್ವಾಮಿಯವರ ನಿರ್ದೇಶನದಲ್ಲಿ ಚೆನ್ನಾಗಿ ಮೂಡಿಬಂದಿತು. ಚಿತ್ರದಲ್ಲಿ ಮಹದೇವ ಪ್ರಸಾದರ ಬಗ್ಗೆ ವಿಧಾನಪರಿಷತ್ ಸಭಾಪತಿ ಡಿ.ಹೆಚ್. ಶಂಕರಮೂರ್ತಿಯವರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವೆ ಉಮಾಶ್ರೀ, ಸಚಿವರಾದ ಜಯಮಾಲಾ, ಗೀತಾ ಮಹಾದೇವ ಪ್ರಸಾದ್ ಸಂದರ್ಶನದ ಜೊತೆಗೆ ಮಹದೇವ ಪ್ರಸಾದ್‌ರವರು ಪಕ್ಷಾತೀತರಾಗಿ, ಜಾತ್ಯಾತೀತರಾಗಿ ಹೇಗೆ ಒಬ್ಬ ರಾಜಕಾರಣಿ ಎನ್ನುವುದು ಚೆನ್ನಾಗಿ ಮೂಡಿ ಬಂದಿತು.

—ಶಿಲ್ಪಾ ಸಿರಿ, ಕೊಡಗು

ವಾರದ ಪತ್ರ

## ಟಿಆರ್‌ಪಿ ಮಹಾತ್ಮೆ

ಝೀ ವಾಹಿನಿಯ 'ಡಾನ್ಸ್ ಕರ್ನಾಟಕ ಡಾನ್ಸ್' ಕಾರ್ಯಕ್ರಮದಲ್ಲೊಂದು ಪ್ರಹಸನ! 2 ವಾರದ ಹಿಂದೆ ಸ್ಪರ್ಧಿ ಸುನೀಲ್ ರಿಹರ್ಸಲ್ ಮಾಡುವಾಗ ಎರಡನೇ ಮಹಡಿಯಿಂದ ಕೆಳಗೆ ಬಿದ್ದು ಎರಡೂ ಕಾಲುಗಳಿಗೆ ದಪ್ಪ ಬ್ಯಾಂಡೇಜ್ ಧರಿಸಿದ್ದ. ಸುನೀಲ್‌ನನ್ನು ವೇದಿಕೆಯ ಮೇಲೆ ಕುರ್ಚಿಯಲ್ಲಿ ಕುಳ್ಳಿರಿಸಿ ನಿರೂಪಕಿ ಅನುಶ್ರೀ, ಅರ್ಜುನ್ ಜನ್ಯ ಮತ್ತು ವಿಜಯರಾಘವೇಂದ್ರ ಎಲ್ಲರೂ ಕಣ್ಣೀರು ಸುರಿಸಿದರು. ಸಹಸ್ಪರ್ಧಿಯಂತೂ ಅವನ ಕೊರಳನ್ನು ಬಳಸಿ ಬಿಕ್ಕಿದಳು. ನಿಜ, ಅನುಕಂಪ ತೋರಬೇಕಾದ್ದೇ! ಬೇಡ ಎನ್ನುವುದಿಲ್ಲ.

ಆದರೆ ಇದೇ ಅನುಕಂಪವನ್ನು ಇದೇ ವಾಹಿನಿಯ 'ಮಹಾನದಿ' ಧಾರಾವಾಹಿ ಪ್ರಸಾರದ ವೇಳೆ ನಟಿ ಪದ್ಮ ಕುಮಟಾ ಗತಿಸಿದಾಗ ಏಕೆ ತೋರಲಿಲ್ಲ? ಕೊನೆಯ ಪಕ್ಷ ಅವರ ಭಾವಚಿತ್ರ ತೋರಿಸಿ ಒಂದು ಹಾರ ಹಾಕಬಹುದಿತ್ತು! ಇದೇ ರೀತಿ ಕಲರ್ಸ್ ಕನ್ನಡದ 'ಅಗ್ನಿಸಾಕ್ಷಿ'ಯ ಪಾತ್ರಧಾರಿ ಸುದರ್ಶನ್ ನಿಧನರಾದಾಗಲೂ ಅಸಡ್ಡೆ ತೋರಿದರು. ಎಲೆಲೆ ಟಿಆರ್‌ಪಿ ನಿನ್ನ ಮಹಿಮೆಯನದೆಂತು ಬಣ್ಣಿಸಲಿ!

—ಕೆ.ಆದಿತ್ಯ ಹೆಬ್ಬಾರ್, ಹರಪನಹಳ್ಳಿ

## ವಿರಳ ಧಾರಾವಾಹಿ

ಝೀ ಕನ್ನಡ ವಾಹಿನಿಯ 'ಪತ್ತೇದಾರಿ ಪ್ರತಿಭಾ' ಕುಟುಂಬ ಹಾಗೂ ವೃತ್ತಿ ಎಂಬ ಎರಡು ದೋಣಿಗಳಲ್ಲಿ ಕಾಲಿಟ್ಟು ಸಮತೋಲನ ಸಾಧಿಸಲು ಹೆಣಗುತ್ತಿರುವ ಸಹಸ್ರಾರು ಉದ್ಯೋಗಸ್ಥ ಮಹಿಳೆಯರ ಕಥೆಯನ್ನು ಅನಾವರಣ ಮಾಡುತ್ತಿದೆ. ಸಮಸ್ಯೆ, ತವಕ ತಲ್ಲಣಗಳ ಸಮರ್ಥ ಚಿತ್ರಣವನ್ನು ಯಾವುದೇ ಅತಿಮಾನುಷ ಶಕ್ತಿಯ ವೈಭವವಿಲ್ಲದೆ ಸರಳವಾಗಿ ವೀಕ್ಷಕರ ಮನಗಳಿಗೆ ತಲುಪಿಸುತ್ತಿರುವ 'ಪತ್ತೇದಾರಿ ಪ್ರತಿಭಾ' ಒಂದು ವಿರಳವೆನಿಸುವ ಅತ್ಯುತ್ತಮ ಧಾರಾವಾಹಿ.

—ಮೀರಾ ಮೋಹನ್, ಬೆಂಗಳೂರು

## ಗೊಂದಲದ ಪಾತ್ರಗಳು

'ಅಗ್ನಿ ಸಾಕ್ಷಿ'ಯಲ್ಲಿ ರಾಧಿಕಾಳ ಪಾತ್ರವನ್ನು ಇಷ್ಟ ಬಂದಂತೆಲ್ಲಾ ತಿರುಚುತ್ತಿದ್ದಾರೆ. ಮೊದಲು ಚಂದ್ರಿಕಾಳ ಬಂಧನದಲ್ಲಿ ಇರುವಂತೆ, ಆ ಮೇಲೆ ಗೌತಮ್ ಅವಳ ಫೋಟೋಗೆ ಹಾರ ಹಾಕಿ ಅವಳ ತಿಥಿ ಮಾಡಿ ಅವಳು ಸತ್ತಿರುವಂತೆ ನಂಬಿಸಿದರು. ರಾಧಿಕಾಳ ಮಗು ಆಯುಷಿ ಎಂದು ನಿರೂಪಿಸಿದರು. ಮತ್ತೆ ರಾಧಿಕಾ ಬದುಕಿರುವಂತೆ ಅವಳೊಟ್ಟಿಗೆ ಚಂದ್ರಿಕಾ ಸ್ನೇಹದಿಂದಿರುವಂತೆ ಹೆಣೆದಿದ್ದಾರೆ. ಅಲ್ಲದೆ ಈವರೆಗೂ ಆಯುಷಿಗೆ ಅವಳ ಸಹೋದರಿ ಇರುವ ಸೂಚನೆಯೂ ಇಲ್ಲದೆ ಇದ್ದಕ್ಕಿದ್ದಂತೆ ಖುಷಿ ತಿಂಡಿಪೋತಿಯಾಗಿ ಪ್ರತ್ಯಕ್ಷ ಮಾಡಿಸಿದ್ದಾರೆ. ಹೀಗೆ ಕಥೆಯನ್ನು ತಿರುಚುತ್ತಾ ವೀಕ್ಷಕರನ್ನೂ ದಡ್ಡರನ್ನಾಗಿ ಮಾಡುವ ಯೋಚನೆ ಇದೆಯೇ?

—ಎಂ.ಆರ್. ಕಮಲಮ್ಮ, ಬೆಂಗಳೂರು

## ಸಂಗೀತ ಪರಿಚಯ

ಚಂದನವಾಹಿನಿಯು ತನ್ನದೇ ವಿಶಿಷ್ಟ ಕಾರ್ಯಕ್ರಮಗಳನ್ನು ಪ್ರೇಕ್ಷಕರಿಗೆ ನೀಡುತ್ತಿದೆ. ಪ್ರತಿ ರವಿವಾರ ಬೆಳಿಗ್ಗೆ 9 ಗಂಟೆಗೆ ಪ್ರಸಾರವಾಗುತ್ತಿರುವ 'ರಾಗಿಣಿ ನೀ ಬಹುರೂಪಿಣಿ' ಅದರಲ್ಲಿ ಒಂದು. ವೆಂಕಟೇಶ ಶರ್ಮಾ ಅವರ ಪರಿಕಲ್ಪನೆ, ನಿರ್ದೇಶನ ಮತ್ತು ಸಂಯೋಜನೆಯ ವಿಶಿಷ್ಟ ಸಂಗೀತ ಕಾರ್ಯಕ್ರಮ. ಕನ್ನಡ ಭಾವಗೀತೆಗಳ ಭಾವ ಸಂಗಮ ಇದಾಗಿದೆ. ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತದ ವಿಶಿಷ್ಟ ರಾಗಗಳಲ್ಲಿ ಒಂದನ್ನು ಆರಿಸಿಕೊಂಡು ಅವುಗಳ ಪರಿಚಯ ಮಾಡಿಕೊಡುತ್ತಾರೆ. ಆ ರಾಗವನ್ನು ಹಾಡುವ ಸಮಯ, ಅವರೋಹಣ, ಆರೋಹಣ ವಿವರ ಒದಗಿಸಿ ಅದರ ಆಲಾಪವನ್ನು ಕೂಡ ಪ್ರೇಕ್ಷಕರಿಗೆ ನೀಡುತ್ತಾರೆ. ಒಂದು ರಾಗದ ಸಂಪೂರ್ಣ ಪರಿಚಯ ಮಾಡಲಾಗುತ್ತಿದೆ.

ಪರಿಚಯಿಸಿದ ರಾಗದ ಮೇಲೆ ಒಂದು ಕನ್ನಡ ಚಿತ್ರಗೀತೆ, ಭಾವ ಗೀತೆಯನ್ನು ಪ್ರಸಿದ್ಧ ಕಲಾವಿದರಿಂದ ಹಾಡಿಸುತ್ತಾರೆ. ಅವುಗಳನ್ನು ಕೇಳುವುದೇ ಒಂದು ಸೌಭಾಗ್ಯ ಎನ್ನಬಹುದು. ಇಂತಹ ಕಾರ್ಯಕ್ರಮವನ್ನು ಕೇಳುವುದರಿಂದ ಹೊಸ ಗಾಯಕರಿಗೆ, ಸಂಗೀತಗಾರರಿಗೆ ಹೊಸ ಹೊಸ ರಾಗಗಳ ಪರಿಚಯದ ಜೊತೆಗೆ ಇನ್ನಷ್ಟು ಹಾಡುಗಳನ್ನು ಈ ರಾಗಗಳಲ್ಲಿ ಹಾಡುವ ಉಮೇದು ಉಂಟಾಗುತ್ತದೆ. ದ.ರಾ. ಬೇಂದ್ರೆ, ಕುವೆಂಪು, ಪು.ತಿ.ನ., ಚೆನ್ನವೀರ ಕಣವಿ, ಎಚ್‌ಎಸ್‌ವಿ, ಕೆ.ಎಸ್.ನ. ಜಿ.ಎಸ್.ಎಸ್ ದೊಡ್ಡ ರಂಗೇಗೌಡ ಅವರ ಗೀತೆಗಳನ್ನು ಹಾಡುತ್ತಾರೆ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ನೀರಸ ನಿರೂಪಣೆ

ತುಂಬಾ ಕುತೂಹಲ ಕೆರಳಿಸಿದ್ದ ಝೀ ವಾಹಿನಿಯ 'ಪತ್ತೇದಾರಿ ಪ್ರತಿಭಾ' ಇತ್ತೀಚೆಗೆ ಪೇಲವವಾಗಿದೆ. ಆಂಗ್ಲ ಭಾಷೆಯ ಪತ್ತೇದಾರಿ ಸಾಹಿತಿಗಳಾದ ಆಗಾಥಾ ಕ್ರಿಸ್ಟೀ, ಆರ್ಥರ್ ಕಾನನ್ ಡಾಯ್ಲ್ ಮೊದಲಾದವರ ನೆನಪು ತರುವಂತಹ ಸಂಚಿಕೆಗಳು ಚೆನ್ನಾಗಿದ್ದವು. ಇತ್ತೀಚೆಗೆ ಪ್ರತಿಭಾಳ ಸಾಂಸಾರಿಕ ಜೀವನದ ಚಿತ್ರಣವೇ ಹೆಚ್ಚಾಗಿದೆ. ಪ್ರತಿಭಾಳಿಗೆ ಸಹಾಯ ಮಾಡಲು ಅವಳ ತವರಿನವರು ಯಾರೂ ಬರುವುದೇ ಇಲ್ಲವೇ?

—ಜಾಹ್ನವಿ ಕಣಕಟ್ಟೆ , ಬೆಂಗಳೂರು

